# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಎಂವೈಎಸ್-126/2016/ಪಿಪಿ
ಮತ್ತು
ಸಂಖ್ಯೆ:.ಕಂಪ್ಲೆಂಟ್/ಉಪಲೋಕ್/ಎಂವೈಎಸ್-241/2016/ಪಿಪಿ
ಮತ್ತು
ಸಂಖ್ಯೆ:ಕಂಪ್ಲೆಂಟ್/ಉಪಲೋಕ್/ಎಂವೈಎಸ್-242/2016/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 18/01/2018
20

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

**ವಿಷಯ:** ಶ್ರೀ ಅಂತೋಣಿರಾಜು, ಅಂಬೇಡ್ಕರ್ ಬೀದಿ, ಕಣ್ಣೂರು ಗ್ರಾಮ ಮತ್ತು ಅಂಚೆ, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*-*-*

1. ದೂರುದಾರರಾದ ಶ್ರೀ ಅಂತೋಣಿ ರಾಜು ಬಿನ್ ದೊರೆಸ್ವಾಮಿ, ಅಂಬೇಡ್ಕರ್ ಬೀದಿ, ಕಣ್ಣೂರು ಗ್ರಾಮ, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ ರವರು ಎದುರುದಾರರಾದ (1) ಶ್ರೀ ಸಿ. ಮಹದೇವಯ್ಯ, ತಹಶೀಲ್ದಾರ್, ಕೊಳ್ಳೇಗಾಲ ತಾಲ್ಲೂಕು (2) ಶ್ರೀ ನಿಂಗಶೆಟ್ಟಿ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಂಚಾಯತ್‌ರಾಜ್ ಇಂಜಿನಿಯರಿಂಗ್ ಉಪವಿಭಾಗ, ಕೊಳ್ಳೇಗಾಲ ಮತ್ತು (3) ಶ್ರೀ ಸಿದ್ದಪ್ಪಾಜಿಗೌಡ, ಸಹಾಯಕ ಅಭಿಯಂತರರು-2, ಪಂಚಾಯತ್‌ರಾಜ್ ಇಂಜಿನಿಯರಿಂಗ್ ಉಪವಿಭಾಗ, ಕೊಳ್ಳೇಗಾಲ ರವರುಗಳ ವಿರುದ್ಧ ಆಪಾದಿಸಿ ಈ ಕಛೇರಿಗೆ ದಿನಾಂಕ 18/01/2016 ರಂದು ದೂರು ಸಲ್ಲಿಸಿರುತ್ತಾರೆ. ಹುಣುಸೇಪಾಳ್ಯ ಗ್ರಾಮದ ಪರಿಶಿಷ್ಟ ಜಾತಿ ಹಿಂದೂ ರುದ್ರಭೂಮಿಗೆ ಸುತ್ತುಗೋಡೆ ನಿರ್ಮಾಣ ಕಾಮಗಾರಿ (ಅಭಿವೃದ್ಧಿ ಕಾಮಗಾರಿ) ಯಲ್ಲಿ ಅವ್ಯವಹಾರ ಹಾಗೂ ಅನುದಾನ ದುರ್ಬಳಕೆ ಆಗಿರುತ್ತದೆಂದು ಆಪಾದಿಸಿರುತ್ತಾರೆ.

2. ದೂರಿನ ತನಿಖೆ ಕೈಗೊಳ್ಳಲು ಮುಖ್ಯ ಅಭಿಯಂತರರು, ತಾಂತ್ರಿಕ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರಿಗೆ ವಹಿಸಿದ್ದು, ತಮ್ಮ ವರದಿಯಲ್ಲಿ ಹಿಂದೂ ರುದ್ರಭೂಮಿ 2014-15 ಲೆಕ್ಕಶೀರ್ಷಿಕೆಯಡಿ ರೂ.3.50 ಲಕ್ಷ ಅಂದಾಜು ಮೊತ್ತದ ಕಾಮಗಾರಿಯಾದ "ಕೊಳ್ಳೇಗಾಲ ತಾಲ್ಲೂಕು, ಹುಣುಸೇಪಾಳ್ಯ ಗ್ರಾಮದ ಪರಿಶಿಷ್ಟ ಜಾತಿ ಹಿಂದೂ ರುದ್ರಭೂಮಿಗೆ ಸುತ್ತುಗೋಡೆ ನಿರ್ಮಾಣ" ಕಾಮಗಾರಿಯನ್ನು ನಿರ್ವಹಿಸದೇ, ಪಂಚಾಯತ್‌ರಾಜ್ ಇಂಜಿನಿಯರಿಂಗ್ ಉಪವಿಭಾಗ, ಕೊಳ್ಳೇಗಾಲ

ವತಿಯಿಂದ ಹಿಂದೂ ರುದ್ರಭೂಮಿ 2014–15 ಲೆಕ್ಕಶೀರ್ಷಿಕೆಯಡಿ ಯಾವುದೇ ಕಾಮಗಾರಿ ಕೈಗೊಳ್ಳದೇ, ಹಿಂದೆ ಎಂ.ಜಿ.ಎನ್.ಆರ್.ಇ.ಜಿ.ಎ ಸಂಸ್ಥೆಯಿಂದ ಪೂರ್ಣಗೊಂಡಿರುವ ಹಳೆಯ ಕಾಮಗಾರಿಗೇ ಮತ್ತೊಮ್ಮೆ ಹಿಂದೂ ರುದ್ರಭೂಮಿ 2014–15 ಲೆಕ್ಕಶೀರ್ಷಿಕೆಯಡಿ ಸ್ವಂತ ಲಾಭಕ್ಕಾಗಿ ಮುಕ್ತಾಯ ವರದಿಯನ್ನು ನೀಡಿ ಪೂರ್ಣ ಅನುದಾನವನ್ನು ದುರ್ಬಳಕೆ ಮಾಡಿರುವುದು ಸಾಬೀತಾಗಿರುತ್ತದೆ. 1ನೇ ಎದುರುದಾರರವರು ದಾಖಲಾತಿಗಳನ್ನು ಪರಿಶೀಲಿಸದೇ, ಕಾಮಗಾರಿಯ ಬಗ್ಗೆ ಖಚಿತಪಡಿಸಿಕೊಳ್ಳದೇ ಹಣ ಬಿಡುಗಡೆ ಮಾಡಿರುವುದು ನಿಯಮ ಬಾಹಿರವಾಗಿರುತ್ತದೆ ಮತ್ತು ಸರ್ಕಾರದ ಕೆಲಸದ ಬಗ್ಗೆ ಅವರ ನಿರ್ಲಕ್ಷವನ್ನು ಹಾಗೂ ಬೇಜವಾಬ್ದಾರಿತನವನ್ನು ತೋರಿಸುತ್ತದೆ. 2ನೇ ಎದುರುದಾರರವರು ಖುದ್ದಾಗಿ ಕಾಮಗಾರಿಯ ಸ್ಥಳ ಪರಿಶೀಲನೆ ಕೈಗೊಂಡು, ಚೆಕ್‌ಮೆಸರ್ ಮಾಡಬೇಕಾಗಿದ್ದು, ಸದರಿಯವರು ಕಾಮಗಾರಿಯ ಸ್ಥಳ ಪರಿಶೀಲನೆ ನಡೆಸದೇ ಅಳತೆ ಪುಸ್ತಕದಲ್ಲಿ ಮತ್ತು ಬಿಲ್ಲಿನಲ್ಲಿ ಚೆಕ್‌ಮೆಶರ್ ಮಾಡಿರುವುದಾಗಿ ಸಹಿ ಮಾಡಿರುತ್ತಾರೆ. ಅಲ್ಲದೇ, ಕಾಮಗಾರಿಯ ದಿನಾಂಕವಿಲ್ಲದ ಮುಕ್ತಾಯ ವರದಿಯನ್ನು ನೀಡಿರುತ್ತಾರೆ. ಇದರಿಂದಾಗಿ, ಕಾಮಗಾರಿಗೆ ಹಣ ಪಾವತಿ ಮಾಡಲು ಸಾಧ್ಯವಾಗಿರುತ್ತದೆ. ಆದ್ದರಿಂದ, ಸದರಿ ಅವ್ಯವಹಾರ ಹಾಗೂ ಸರ್ಕಾರದ ಹಣ ದುರ್ಬಳಕೆಯಲ್ಲಿ ಸಮಪಾಲು ಇರುವುದು ಕಂಡು ಬಂದಿರುತ್ತದೆ. 3ನೇ ಎದುರುದಾರರವರು ಪೂರ್ಣಗೊಳಿಸಿರುವುದಾಗಿ ಮುಕ್ತಾಯ ಪ್ರಮಾಣ ಪತ್ರವನ್ನು ಕೂಡ ನೀಡಿರುತ್ತಾರೆ. ಕಾಮಗಾರಿಯ ಗುತ್ತಿಗೆದಾರರು ಕಾಮಗಾರಿ ನಿರ್ವಹಿಸದೆ ಉದ್ದೇಶಪೂರ್ವಕವಾಗಿ ಬಿಲ್ಲನ್ನು ಸಲ್ಲಿಸಿರುತ್ತಾರೆ. ಯೋಜನೆಯ ನಿಯಮ ಪಾಲಿಸದೇ ಹಣ ಪಾವತಿಸಿದ್ದು, ಉದ್ದೇಶಪೂರ್ವಕವಾಗಿಹಣ ದುರ್ಬಳಕೆ ಮಾಡಿರುವುದು ತನಿಖೆಯಿಂದ ಕಂಡು ಬಂದಿರುತ್ತದೆ. 1 ರಿಂದ 3ನೇ ಎದುರುದಾರರವರು ಉದ್ದೇಶ ಪೂರ್ವಕವಾಗಿ ಕಾಮಗಾರಿಯನ್ನು ನಿರ್ವಹಿಸದೇ, ದಾಖಲಾತಿಗಳನ್ನು ಸೃಷ್ಟಿಸಿ, ಹಣ ಪಾವತಿ ಮಾಡಿ ಸರ್ಕಾರದ ರೂ.3.50 ಲಕ್ಷ ಹಣವನ್ನು ದುರ್ಬಳಕೆ ಮಾಡಿರುತ್ತಾರೆ. 1 ರಿಂದ 3ನೇ ಎದುರುದಾರರವರಿಂದ ಸಮನಾಗಿ ತಲಾ ರೂ.1,16,670/– ಗಳ ವಸೂಲಾತಿಯನ್ನು ಮಾಡಿ ಸರ್ಕಾರಕ್ಕೆ ಆಗಿರುವ ನಷ್ಟವನ್ನು ಭರಿಸಬೇಕಾಗಿರುತ್ತದೆ.

3. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **1 ರಿಂದ 3ನೇ ಎದುರುದಾರರವರು ಉದ್ದೇಶ ಪೂರ್ವಕವಾಗಿ ಕಾಮಗಾರಿಯನ್ನು ನಿರ್ವಹಿಸದೇ, ದಾಖಲಾತಿಗಳನ್ನು ಸೃಷ್ಟಿಸಿ, ಹಣ ಪಾವತಿ ಮಾಡಿ ಸರ್ಕಾರದ ರೂ.3.50 ಲಕ್ಷ ಹಣವನ್ನು ದುರ್ಬಳಕೆ ಮಾಡಿದ್ದು, 1 ರಿಂದ 3ನೇ ಎದುರುದಾರರವರಿಂದ ಸಮನಾಗಿ ತಲಾ ರೂ.1,16,670/– ಗಳ ವಸೂಲಾತಿಯನ್ನು ಮಾಡಿ ಸರ್ಕಾರಕ್ಕೆ ಆಗಿರುವ ನಷ್ಟವನ್ನು ಭರಿಸಲು ಸೂಕ್ತ ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.** ಈ ಬಗ್ಗೆ ಎರಡು

ತಿಂಗಳೊಳಗೆ ಕ್ರಮ ಕೈಗೊಂಡು, ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ **ಒಂದು ತಿಂಗಳಯೊಳಗೆ** ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 20/1/18
(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ,
ಬೆಂಗಳೂರು.